Amount allotted to Belgaum District for Rural Housing and Housing for Denotified Tribes.

*Q.—559. Sri R. S. PATIL (Ramdurg).—

Will the Government be pleased to state :—

(*a*) the amount allotted to Belgaum District for Rural Housing and Housing for Denotified Tribes, Nomadic and Semi-Nomadic Tribes for the year 1964-65 ;

(*b*) the amount withdrawn by the Government ?

*A.—Smt. YASHODHARA DASAPPA (Minister for Social Welfare).—

(*a*) Rural Housing—Rs. 8,000.
Denotified Tribes—Rs. 10,000.
Nomadic and Semi-Nomadic Tribes-Rs. 8,000.

(*b*) A sum of Rs. 4,000 was withdrawn under Rural Housing Scheme.

No amount has been withdrawn out of the amount allotted for Denotified Tribes and Nomadic and Semi-Nomadic Tribes.

ಶ್ರೀ ಆರ್. ಎನ್. ಪಾಟೀಲ್.—ಗ್ರಾಮಾಂತರ ಗೃಹ ನಿರ್ಮಾಣ ಸಂಬಂಧದಲ್ಲಿ ಎಷ್ಟು ಹಣ ವಿತರಣೆ ಮಾಡಬೇಕೆಂದು ಸಂಬಂಧಪಟ್ಟ ಯಾವ ಅಧಿಕಾರಿಗೆ ತಿಳಿಸಲಾಗಿತ್ತು ?

†ಶ್ರೀಮತಿ ಯಶೋಧರ ದಾಸಪ್ಪ.—4,000 ರೂಪಾಯಿ ಬಿ.ಡಿ.ಓ. ಅವರು ವಾಪಸ್ ಕೊಟ್ಟಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗೃಹ ನಿರ್ಮಾಣ ಯೋಜನೆಯಲ್ಲಿ ನೆಲಮಂಗಲ ತಾಲ್ಲೂಕಿನಲ್ಲಿ ಕಟ್ಟಿಸಿದ ಮನೆಗಳು ನಾಲ್ಕು ವರ್ಷದಲ್ಲಿ ಬಿದ್ದು ಹೋಗಿವೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಕಾರಣವೇನು ?

ಶ್ರೀಮತಿ ಯಶೋಧರ ದಾಸಪ್ಪ.—ಬೇರೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕೆ ಆಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೋಮ್ಯಾಡಿಕ್ ಟ್ರೈಬ್ಸ್ ಅವರ ಮನೆ ಕಟ್ಟುವುದಕ್ಕೋಸ್ಕರ 8,000ರೂಪಾಯಿ ಕೊಟ್ಟಿರುವುದು ಕಡಿಮೆಯಾಗಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಈ ಹಣ ವಾಪಸ್ಸು ತೆಗೆದುಕೊಂಡಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಒಂದು ಮನೆ ಕಟ್ಟುವುದಕ್ಕೆ ಸಾವಿರ ರೂಪಾಯಿ ಕೊಡುತ್ತಾ ಇದ್ದಿರಿ. ಹಾಗಾದರೆ ಅದಕ್ಕಿಂತ ಕಡಿಮೆ ಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಈ ಹಣ ಸಾಲದು ಎಂದು ಗೊತ್ತಿದೆ. 780 ರೂಪಾಯಿ ಮೇರೆ ಒಂದು ಮನೆಗೆ ಕೊಡುತ್ತೇವೆ.

ಶ್ರೀ ಎಸ್. ನುಚ್ಚಯ್ಯ ನಾಯಕ.—ಹಣವನ್ನು ವರ್ಷದ ಆಖೈರಿಗೆ ಒದಗಿಸುವುದರಿಂದ ಹಣವನ್ನು ಉಪಯೋಗಿಸಿಕೊಳ್ಳದೆ ಸರೆಂಡರ್ ಮಾಡುವ ಪರಿಸ್ಥಿತಿ ಬರುತ್ತದೆ ಎಂಬುದು ಗೊತ್ತಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಅದು ಕಂಡು ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಅಲೆದಾಡುವ ಪಂಗಡದಲ್ಲಿ ಲಂಬಾಣಿಗಳು ಸೇರುತ್ತಾರೆ. ಈ ಲಂಬಾಣಿ ಪಂಗಡದವರಿಗೆ ವಸತಿ ಒದಗಿಸುವುದಕ್ಕೆ ಸರಕಾರ ಏನಾದರೂ ಖಚಿತವಾದ ಕಾರ್ಯಕ್ರಮ ತೆಗೆದು ಕೊಂಡಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಡೀ—ನೋಟಿಫೈಡ್ ಟ್ರೈಬ್ಸ್‌ನಲ್ಲಿ ಲಂಬಾಣಿಗಳು ಸೇರುವುದರಿಂದ ಅವರ ಯೋಗಕ್ಷೇಮಕ್ಕಾಗಿ ಗೃಹ ನಿರ್ಮಾಣಕ್ಕೋಸ್ಕರ ಹಣ ಖರ್ಚುಮಾಡಿದೆ.

---

†Indicates that the remarks or speeches have not been revised by the member concerned.

ಶ್ರೀ ಕೆ. ಲಕ್ಕಪ್ಪ.—ಲಂಬಾಣಿ ಜನಗಳು ಕೂಡ ಅರೆದಾಡುವ ಸ್ವಭಾವವುಳ್ಳವರಾಗಿದ್ದಾರೆ. ಆದುದರಿಂದ ಲಂಬಾಣಿ ಜನಗಳಿಗೆ ವಸತಿ ಒದಗಿಸುವುದಕ್ಕೆ ಗೃಹ ನಿರ್ಮಾಣ ಕಾರ್ಯವನ್ನು ಅತಿ ಜಾಗ್ರತೆ ಮಾಡಿಸಿಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಬೊಂಬಾಯಿ ಕರ್ನಾಟಕ ಪ್ರದೇಶದಲ್ಲಿ ಈ ಲಂಬಾಣಿ ಜನರು ಡೀ—ನೋಟೀಫೈಡ್ ಟ್ರೈಬ್ಸ್‌ನಲ್ಲಿ ಸೇರುತ್ತಾರೆ. ಆದುದರಿಂದ ಅವರಿಗೆ ಹಣ ಕೊಟ್ಟಿದ್ದೇವೆ. ಖರ್ಚು ಮಾಡುತ್ತಿದ್ದಾರೆ. ಆದರೆ ಹಳೇ ಮೈಸೂರು ಪ್ರದೇಶದಲ್ಲಿ ಈ ಲಂಬಾಣಿ ಜನಗಳು ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಬರುವುದರಿಂದ ಅವರ ಬಗ್ಗೆ ಇರುವ ಯೋಜನೆಯ ಮುಖೇನ ಅವರು ಹಣ ಪಡೆಯಬಹುದು.

ಶ್ರೀ ಎಸ್. ಸುಬ್ಬಯ್ಯ ನಾಯಕ.—ಬರುವ ವರ್ಷ ಅವರಿಗೆ ಹಣ ಕೊಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಅರ್ಜಿಗಳು ಬಂದರೆ ಖಂಡಿತವಾಗಿ ಕೊಡುತ್ತೇವೆ.

Inspectors of Schools in Bangalore District

* *Q.*—586. **Sri T. MADIAH GOWDA** (Ramanagaram) [on behalf of SRI C. R. RANGE GOWDA (Magadi)].—

Will the Government be pleased to state :—

(*a*) the number of Inspectors of Schools who have put in more than three years of service in each taluk of Bangolore District ;

(*b*) whether there are any complaints against them ;

(*c*) if so, nature of the complaints ;

(*d*) the action they have taken in that respect ?

A.—**Sri S. R. KANTHI** (Minister for Education).—

(*a*) Four.

(*b*) Yes, in respect of two.

(*c*) Allegations of missappropriation of funds, corruption and administrative delays.

(*d*) Allegations against one Inspector were enquired into and found to be baseles.

In respect of the other Inspectors an enquiry has been instituted.

ಶ್ರೀ ಟಿ. ಮಾದಯ್ಯ ಗೌಡ.—ದೂರು ಬಂದಿರುವ ಈ ಇಬ್ಬರು ಇನ್‌ಸ್ಪೆಕ್ಟರರು ಯಾವ ತಾಲ್ಲೂಕಿಗೆ ಸೇರಿದವರು ?

ಶ್ರೀ ಎಸ್. ಆರ್. ಕಂಠಿ.—ಒಬ್ಬರು ದೇವನಹಳ್ಳಿ ತಾಲ್ಲೂಕಿನವರು. ಇನ್ನೊಬ್ಬರು ಮಾಗಡಿ ತಾಲ್ಲೂಕಿನವರು.

ಶ್ರೀ ಟಿ. ಮಾದಯ್ಯ ಗೌಡ.—ಮತ್ತೊಬ್ಬ ಇನ್‌ಸ್ಪೆಕ್ಟರರ ಸಂಬಂಧದಲ್ಲಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಅಪ್ಪಣೆ ಕೊಡಿಸಿದ್ದಿರಿ. ಹಾಗಾದರೆ ವಿಚಾರಣೆಯ ಕಾಲದಲ್ಲಿ ಅವರನ್ನು ಸಸ್ಪೆಂಡ್ ಮಾಡಿ ಇಲ್ಲವೆ ಬೇರೆ ಕಡೆ ವರ್ಗಾವಣೆ ಮಾಡಿದರೆ ವಿಚಾರಣೆಗೆ ಅನುಕೂಲವಾಗುತ್ತದೆ, ಎಂದು ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಇನ್‌ಕ್ವಾಯರಿ ಯಾರ ಮೇಲೆ ಇರುತ್ತದೆಯೋ ಅವರನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುತ್ತಾರೆ. ಆದರೆ ಈ ಕೇಸ್‌ನಲ್ಲಿ ಟ್ರಾನ್‌ಫರ್ ಮಾಡಿಲ್ಲ. ಟ್ರಾನ್ಸ್‌ಫರ್ ಮಾಡುವ ವಿಚಾರ ಇದೆ.

ಶ್ರೀ ಟಿ. ಮಾದಯ್ಯ ಗೌಡ.—ಸರಕಾರದ ಗಮನಕ್ಕೆ ಅಥವಾ ಇಲಾಖೆಯ ಗಮನಕ್ಕೆ ಬಂದು ಎಷ್ಟು ದಿವಸವಾಯಿತು ?